# ಕರ್ನಾಟಕ ಲೋಕಾಯುಕ್ತ

**ಕಡತ ಸಂಖ್ಯೆ:ಕಲೋ/ಆಡಳಿತ-1/119/2016-17** **ದಿನಾಂಕ 29/08/2024**

## ಸುತ್ತೋಲೆ

**ವಿಷಯ:** ಪ್ರಪತ್ರ ಸಂಖ್ಯೆ-2 (ಫಿರ್ಯಾದಿಯ ಅಫಿಡವಿಟ್) ಅನ್ನು ದೃಢೀಕರಿಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು.

**ಉಲ್ಲೇಖ:** ಕಛೇರಿ ಸುತ್ತೋಲೆ ಸಂಖ್ಯೆ:ಲೋಕ್/ಆಡಳಿತ-1/119/ 2016-17, ದಿನಾಂಕ 31/07/2021.

- - - -

ಉಲ್ಲೇಖಿತ ಸುತ್ತೋಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ನಿಯಮ 1985ರ ನಿಯಮ 4ರನ್ವಯ ಸಾರ್ವಜನಿಕರು / ಅರ್ಜಿದಾರರು ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಪ್ರಪತ್ರ ಸಂಖ್ಯೆ-1 (ಫಿರ್ಯಾದು) ಮತ್ತು ಪ್ರಪತ್ರ ಸಂಖ್ಯೆ-2 (ಫಿರ್ಯಾದಿಯ ಅಫಿಡವಿಟ್) ರಲ್ಲಿ ದೂರು ಸಲ್ಲಿಸುವ ಸಂದರ್ಭದಲ್ಲಿ, ಪ್ರಪತ್ರ ಸಂಖ್ಯೆ-2ರಲ್ಲಿ ದೃಢೀಕರಿಸುವ ಸಂದರ್ಭದಲ್ಲಿ, ದೂರುದಾರರ ಗುರುತನ್ನು ಖಚಿತಪಡಿಸಿಕೊಂಡು ನಿಯಮಾನುಸಾರ ದೃಢೀಕರಣ ಮಾಡಲು ತಿಳಿಸಲಾಗಿದೆ.

ಮುಂದುವರೆದು, ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಸಾರ್ವಜನಿಕರು / ಅರ್ಜಿದಾರರು ಪ್ರಪತ್ರ ಸಂಖ್ಯೆ-1 (ಫಿರ್ಯಾದು) ಮತ್ತು ಪ್ರಪತ್ರ ಸಂಖ್ಯೆ-2 (ಫಿರ್ಯಾದಿಯ ಅಫಿಡವಿಟ್) ರಲ್ಲಿ ದೂರು ದಾಖಲಿಸಲು ಹಾಜರಾಗುವ ಸಂದರ್ಭದಲ್ಲಿ, ಪ್ರಪತ್ರ ಸಂಖ್ಯೆ-2 ಅನ್ನು ದೃಢೀಕರಿಸುವ ಅಧಿಕಾರಿಯವರು, **"ಅರ್ಜಿದಾರರು ಸರ್ಕಾರದ ಯಾವುದೇ ಪ್ರಾಧಿಕಾರದಿಂದ ಪಡೆದಿರುವಂತಹ ಭಾವಚಿತ್ರವಿರುವ ದಾಖಲಾತಿಗಳಾದ ಆಧಾರ್ ಕಾರ್ಡ್/ಪಾನ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಇನ್ನಿತರೆ ಯಾವುದಾದರೊಂದು ದಾಖಲಾತಿಯ ಪ್ರತಿಯನ್ನು ಹಾಜರುಪಡಿಸುವಂತೆ ತಿಳಿಸಿ, ಹಾಜರುಪಡಿಸಿದ ದಾಖಲಾತಿಯು ಅರ್ಜಿದಾರರದ್ದೇ ಎಂಬುದನ್ನು ಖಾತ್ರಿಪಡಿಸಿಕೊಂಡು"** ಪ್ರಪತ್ರ ಸಂಖ್ಯೆ-2 ರಲ್ಲಿ ದೃಢೀಕರಿಸುವುದು ಹಾಗೂ ಹಾಜರುಪಡಿಸುವ ದಾಖಲೆಯ ಪ್ರತಿಯನ್ನು ದೂರು ಅರ್ಜಿಯೊಂದಿಗೆ ಲಗತ್ತಿಸಿರುವ ಬಗ್ಗೆ ಪರಿಶೀಲಿಸುವುದು.

ಅರ್ಜಿದಾರರಿಗೆ ದೂರು ದಾಖಲಿಸಿದ ನಂತರದ ಹಂತಗಳ ಬಗ್ಗೆ ಮಾಹಿತಿ ರವಾನಿಸಲು ಅನುಕೂಲವಾಗುವಂತೆ, **ಅರ್ಜಿದಾರರ ಮೊಬೈಲ್ ಸಂಖ್ಯೆ / ಇ-ಮೇಲ್ ವಿಳಾಸವನ್ನು ದೂರು ಅರ್ಜಿಯ ಮುಖಪುಟದಲ್ಲಿ** ಕಡ್ಡಾಯವಾಗಿ ನಮೂದಿಸುವಂತೆ, **ಒಂದು ವೇಳೆ ಅರ್ಜಿದಾರರ ಬಳಿ ಮೊಬೈಲ್ ಸಂಖ್ಯೆ ಇಲ್ಲದೇ ಇದ್ದಲ್ಲಿ, ಅವರ ಹತ್ತಿರದ ಸಂಬಂಧಿಯವರ ಮೊಬೈಲ್ ಸಂಖ್ಯೆಯನ್ನು ನಮೂದಿಸಲು** ತಿಳಿಸುವುದು ಹಾಗೂ ಈ ಬಗ್ಗೆ ಪರಿಶೀಲಿಸುವುದು.

ಸಹಿ/- 29/8

ನಿಬಂಧಕರು
ಕರ್ನಾಟಕ ಲೋಕಾಯುಕ್ತ

**ಇವರಿಗೆ:**

1. ಉಪ ನಿಬಂಧಕರು ಆಡಳಿತ-2, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
2. ಕರ್ನಾಟಕ ಲೋಕಾಯುಕ್ತ ಸಂಸ್ಥೆಯ ಎಲ್ಲಾ ಪೊಲೀಸ್ ಅಧೀಕ್ಷಕರು, ಪೊಲೀಸ್ ಉಪಾಧೀಕ್ಷಕರು ಮತ್ತು ಪೊಲೀಸ್ ನಿರೀಕ್ಷಕರು.